ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ5[8]ಸಗಟು ಖರೀದಿ:09/2010–11 ದಿನಾಂಕ: 06.08.2010

## ಪತ್ರಿಕಾ ಪ್ರಕಟಣೆ

2010–11ನೇ ಸಾಲಿನ ಪುಸ್ತಕ ಸಗಟು ಖರೀದಿ ಯೋಜನೆಯಡಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡುವ ಕುರಿತು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ

* * *

2010–11ನೇ ಸಾಲಿನ ಪುಸ್ತಕ ಸಗಟು ಖರೀದಿ ಯೋಜನೆಯಡಿ, ಸರ್ಕಾರಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡಲು ಲೇಖಕರು/ಪ್ರಕಾಶಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳಿಗೆ/ಶಿಕ್ಷಕರಿಗೆ ಉಪಯುಕ್ತವಾಗುವಂತಹ ಕನ್ನಡ/ಆಂಗ್ಲ/ಹಿಂದಿ ಭಾಷೆಗಳಲ್ಲಿ ಪ್ರಕಟಗೊಂಡಿರುವ ಪುಸ್ತಕಗಳನ್ನು ಸಲ್ಲಿಸಲು ಅರ್ಜಿ ನಮೂನೆಯನ್ನು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ, ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರ ಕಛೇರಿಗಳು, ಮೈಸೂರು, ಬೆಳಗಾಂ ವಿಭಾಗಗಳು ಮತ್ತು ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಕಛೇರಿಗಳಿಂದ ಪಡೆಯಬಹುದಾಗಿದೆ. ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಸಲ್ಲಿಸಬೇಕು.

- ಅರ್ಜಿಗಳನ್ನು ದಿನಾಂಕ: 06.09.2010ರ ಸಂಜೆ 5–30 ರೊಳಗೆ ಜಂಟಿ ನಿರ್ದೇಶಕರು [ಆಡಳಿತ] ಮತ್ತು ಸದಸ್ಯ ಕಾರ್ಯದರ್ಶಿಗಳು, ಪುಸ್ತಕ ಆಯ್ಕೆ ಸಮಿತಿ, ರಾಜ್ಯ ಶಿಕ್ಷಣ ಸಂಪನ್ಮೂಲ ಮತ್ತು ಮಾಹಿತಿ ಕೇಂದ್ರ, [ಸೆರಿಕ್ ಗ್ರಂಥಾಲಯ] ಶೇಷಾದ್ರಿ ಪುರಂ [ಶೇಷಾದ್ರಿ ಪುರಂ ಪೋಲೀಸ್ ಠಾಣೆ ಎದುರು] ಬೆಂಗಳೂರು–560020 [ದೂರವಾಣಿ ಸಂಖ್ಯೆ:23464102,22213129 ] ಇವರಿಗೆ ತಲುಪುವಂತೆ ಸಲ್ಲಿಸಬೇಕು.
- ನಂತರ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಮಾರ್ಗಸೂಚಿ, ಅರ್ಜಿ ನಮೂನೆ ಇನ್ನಿತರೆ ಹೆಚ್ಚಿನ ವಿವರಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ 'ವೆಬ್ ಸೈಟ್' ನಲ್ಲಿ ಪಡೆಯಬಹುದು.

ವೆಬ್ ಸೈಟ್: **http://schooleducation.kar.nic.in**

06/8/10

[ಕೆ.ಆರ್.ಶಶಿಧರ]

ಆಯುಕ್ತರು

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ5[8]ಸಗಟು ಖರೀದಿ:09/2010-11 ದಿನಾಂಕ:06.08.2010

# ಪುಸ್ತಕಗಳ ಆಯ್ಕೆ ಬಗ್ಗೆ ಮಾರ್ಗಸೂಚಿ

ವಿಷಯ: 2010-11ನೇ ಸಾಲಿನ ಸಗಟು ಖರೀದಿ ಯೋಜನೆಯಡಿ ಸರ್ಕಾರಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳ ಆಯ್ಕೆ ಮತ್ತು ಖರೀದಿ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ:99 : ಯೋಯೋಕ.2010ದಿನಾಂಕ:03.04.2010
[ಇಡಿ:49 ಸ್ಕೀಮರ(ಯುನಿಕ್)2010 ದಿನಾಂಕ:03.04.2010]
2. ದಿನಾಂಕ: 02.08.2010ರಂದು ನಡೆದ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಸಭೆಯ ನಡವಳಿಗಳು

* * *

2010-11ನೇ ಸಾಲಿನ ಪುಸ್ತಕ ಸಗಟು ಖರೀದಿ ಯೋಜನೆಯಡಿ, ಸರ್ಕಾರಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಿ ಸರಬರಾಜಿಸುವ ಬಗ್ಗೆ ಯೋಜನೆ ರೂಪಿಸಲಾಗಿದೆ.

ಈ ಯೋಜನೆಯಡಿ ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿರುವಂತಹ ಕನ್ನಡ ಭಾಷೆ, ವ್ಯಾಕರಣ, ವಿಜ್ಞಾನ,ಜೀವ ಶಾಸ್ತ್ರ, ರಸಾಯನ ಶಾಸ್ತ್ರ, ಭೌತಶಾಸ್ತ್ರ, ಗಣಿತ ಶಾಸ್ತ್ರ, ಸಮಾಜ ವಿಜ್ಞಾನ, ಇತಿಹಾಸ, ಭೂಗೋಳ, ಅರ್ಥಶಾಸ್ತ್ರ, ನಿಘಂಟು, ವಿಶ್ವಕೋಶ, ಸಮಾನ ಪದಕೋಶ, ಪ್ರಬಂಧ, ಕಾವ್ಯ, ಕಥನ ಸಾಹಿತ್ಯ, ನಾಟಕ, ಕಾದಂಬರಿ, ಸಾಮಾನ್ಯಜ್ಞಾನ, ಕಲೆ, ಕ್ರೀಡೆ, ವೃತ್ತಿ ಶಿಕ್ಷಣ, ಮಹಾನ್ ಸಾಧಕರ ಜೀವನ ಚರಿತ್ರೆಗಳು, ಆರೋಗ್ಯ ಶಿಕ್ಷಣ, ವಿಜ್ಞಾನದ ಆಕರ ಗ್ರಂಥಗಳು, ಪ್ರಶಸ್ತಿ ಪಡೆದ ಕೃತಿಗಳು, ಕನ್ನಡಕ್ಕೆ ಭಾಷಾಂತರಿಸಿದ ಪ್ರಶಸ್ತಿ ಪಡೆದ ಕೃತಿಗಳು, ಮಾಹಿತಿ ತಂತ್ರಜ್ಞಾನ, ಸಾಮಾನ್ಯ ಹಾಗೂ ಪರಾಮರ್ಶನ ಕೃತಿಗಳು, ಜನಪ್ರಿಯ ವಿಜ್ಞಾನ, ಪರಿಸರ ಅಧ್ಯಯನ ಸೇರಿದಂತೆ ಕನ್ನಡ, ಇಂಗ್ಲಿಷ್, ಹಿಂದೀ ಭಾಷೆಗಳಲ್ಲಿ ಪ್ರಕಟಗೊಂಡಿರುವ ಪುಸ್ತಕಗಳನ್ನು ಆಯ್ಕೆ ಮಾಡಲು ನಿರ್ಧರಿಸಿ, ಲೇಖಕರು ಮತ್ತು ಪ್ರಕಾಶಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

- ಸರ್ಕಾರಿ ಪ್ರೌಢ ಶಾಲಾ ಗ್ರಂಥಾಲಯಗಳಿಗೆ ಉಪಯುಕ್ತವಾದ ಪುಸ್ತಕಗಳನ್ನು ಕೆಳಕಂಡ ವಿಭಾಗಗಳಾಗಿ ವರ್ಗೀಕರಿಸಲಾಗಿದೆ.

## 01. ಶಿಕ್ಷಕರಿಗಾಗಿ ಆಕರ ಗ್ರಂಥಗಳು: :

- ಈ ವಿಭಾಗದಲ್ಲಿ ರಾಜ್ಯ ಸರ್ಕಾರ 8 ರಿಂದ 10ನೇ ತರಗತಿಗೆ ನಿಗದಿಪಡಿಸಿರುವ ಪಠ್ಯವಸ್ತುವನ್ನು ಬೋಧಿಸಲು ಶಿಕ್ಷಕರಿಗೆ ಉಪಯುಕ್ತವಾದ ಪೂರಕ ಸಾಹಿತ್ಯ, ಶಿಕ್ಷಣ ಕ್ಷೇತ್ರದ ಸುಧಾರಣೆಯಲ್ಲಿ ರಾಷ್ಟ್ರ ಮತ್ತು ರಾಜ್ಯದಲ್ಲಿ ಕೈಗೊಳ್ಳಲಾಗಿರುವ ವಿನೂತನ ಯಶಸ್ವಿ ಪ್ರಯೋಗಗಳ ಬಗ್ಗೆ ಸಾಹಿತ್ಯ, ಭಾಷೆ, ಗಣಿತ, ವಿಜ್ಞಾನ, ಇತಿಹಾಸ, ಕಲೆ, ಪರಿಸರ ವಿಜ್ಞಾನ, ಭೂಗೋಳ ಇತ್ಯಾದಿ ಬೋಧನ ವಿಷಯಗಳಿಗೆ ಸಂಬಂಧಿಸಿದ ಕೃತಿಗಳು.
- ವಿಶ್ವಕೋಶಗಳು, ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು, ಮಹಾನ್ ಲೇಖಕರ ಕೃತಿಗಳು.
- ಪ್ರಪಂಚ, ರಾಷ್ಟ್ರ, ರಾಜ್ಯ ಮತ್ತು ಜಿಲ್ಲೆಗಳ ಭೌಗೋಳಿಕ, ಪ್ರಾಕೃತಿಕ ಮತ್ತು ರಾಜಕೀಯ ವಿಷಯವನ್ನೊಳಗೊಂಡ ಅಟ್ಲಾಸ್‌ಗಳು.

## 02. ವಿದ್ಯಾರ್ಥಿಗಳಿಗಾಗಿ:

- ಪ್ರೌಢ ಶಾಲಾ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿರುವ ಸಾಹಿತ್ಯ.
- ರಾಷ್ಟ್ರ ಮತ್ತು ರಾಜ್ಯದ ಇತಿಹಾಸ, ಮತ್ತು ಭೌಗೋಳಿಕ ಅಂಶಗಳನ್ನು ವಿವರಿಸುವ ಕೃತಿಗಳು.

- ಪ್ರಖ್ಯಾತ ವಿಜ್ಞಾನಿಗಳ ಸಾಧನೆ ಮತ್ತು ಜೀವನ ಚರಿತ್ರೆಯನ್ನೊಳಗೊಂಡ ಕೃತಿಗಳು.
- ಭಾಷೆ,ಗಣಿತ,ವಿಜ್ಞಾನ,ಕ್ರೀಡೆ,ಲಲಿತ ಸಾಹಿತ್ಯ,ರಂಗಕಲೆ,ತೋಟಗಾರಿಕೆ, ಕೃಷಿ, ಆರೋಗ್ಯ, ಪ್ರಥಮ ಚಿಕಿತ್ಸೆ, ಯೋಗಾಭ್ಯಾಸ, ನೀತಿ ಶಿಕ್ಷಣ, ಚಿತ್ರಕಲೆ ಮತ್ತು ಪೇಂಟಿಂಗ್, ಮುಂತಾದ ವಿಷಯಗಳ ಕೃತಿಗಳು.
- ವಿದ್ಯಾರ್ಥಿಗಳಲ್ಲಿ ಓದುವ ಕೌಶಲ್ಯ ಮತ್ತು ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸುವಂತಹ ಕುತೂಹಲಕಾರಿ ಕೃತಿಗಳು.
- ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಜ್ಞಾನ ಪ್ರಯೋಗಗಳನ್ನು ಮಾಡಲು ಮಾರ್ಗದರ್ಶನ ನೀಡುವ ಬಗ್ಗೆ ಪೂರಕವಾದ ಕೃತಿಗಳು.
- ಪೌರಾಣಿಕ ಪಾತ್ರಗಳ ಪರಿಚಯ, ರಾಷ್ಟ್ರ ಧ್ವಜದ ಮಹತ್ವ, ರಾಷ್ಟ್ರೀಯ ಭಾವೈಕ್ಯ, ಜಾತ್ಯಾತೀತ ತತ್ವಗಳನ್ನು ಬೋಧಿಸುವ ಕೃತಿಗಳು.
- ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನವನ್ನು ಹೆಚ್ಚಿಸುವಂತಹ ಒಗಟು, ಗಾದೆಗಳು, ಸುಭಾಷಿತ, ಪದಬಂಧಗಳನ್ನೊಳಗೊಂಡ ಕೃತಿಗಳು.
- ಪ್ರೌಢ ಶಾಲಾ ವಿದ್ಯಾರ್ಥಿಗಳ ಇಂಗ್ಲಿಷ್ ಕಲಿಕೆಯನ್ನು ಉತ್ತಮಪಡಿಸಲು ಪೂರಕವಾದ ರೀಡಿಂಗ್ ಕಾರ್ಡ್, ಪುಸ್ತಕಗಳು ಇತ್ಯಾದಿ.
- ವಿದ್ಯಾರ್ಥಿಗಳಲ್ಲಿ ಬರೆಯುವ ಹವ್ಯಾಸವನ್ನು ಬೆಳೆಸುವಂತಹ ಪತ್ರ ಲೇಖನಗಳು, ಪ್ರಬಂಧಗಳು, ಜೀವನ ಚರಿತ್ರೆಗಳು ಇತ್ಯಾದಿ.

➢ *ಲೇಖಕರು ಮತ್ತು ಪ್ರಕಾಶಕರು ಗಮನಿಸಬೇಕಾದ ಅಂಶಗಳು:*

**01.** ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿಯೇ ಸಲ್ಲಿಸಬೇಕು. [ಜೆರಾಕ್ಸ್ ಪ್ರತಿಗಳನ್ನು ಬಳಸಬಹುದು] ಅರ್ಜಿಯ ಹಿಂಭಾಗದಲ್ಲಿ ಪುಸ್ತಕಗಳನ್ನು ಸಲ್ಲಿಸುವ ಬಗ್ಗೆ ವಿವರವಾದ ಸೂಚನೆಗಳನ್ನು ಮುದ್ರಿಸಲಾಗಿದೆ. ಅದರಂತೆ ಅರ್ಜಿಯನ್ನು ಸಲ್ಲಿಸುವುದು.

**02.** ನಿಗದಿತ ನಮೂನೆಯಲ್ಲಿ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿ, ಪ್ರತಿಯೊಂದು ಪುಸ್ತಕದ ಜೊತೆಗೆ ಒಂದು ನಮೂನೆಯನ್ನು ಸಲ್ಲಿಸತಕ್ಕದ್ದು. ಪುಸ್ತಕದಲ್ಲಿ ದರವನ್ನು ಸ್ಪಷ್ಟವಾಗಿ ಮುದ್ರಿಸಿರಬೇಕು. ಸ್ಟಿಕ್ಕರ್ ಅಂಟಿಸಿದ, ತಿದ್ದಿದ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ. ಆಯ್ಕೆಗೆ ಸಲ್ಲಿಸಲಾಗುವ ಪುಸ್ತಕಗಳನ್ನು ಹಿಂದಿರುಗಿಸಲಾಗುವುದಿಲ್ಲ.

**03.** ಪುಸ್ತಕದ ಖರೀದಿ ಬೆಲೆಯನ್ನು ಪುಸ್ತಕ ಆಯ್ಕೆ ಸಮಿತಿಯು ನಿರ್ಧರಿಸುತ್ತದೆ. ಕನ್ನಡ ಮತ್ತು ಕನ್ನಡೇತರ ಪುಸ್ತಕಗಳಿಗೂ ಇದೇ ನಿಯಮ ಅನ್ವಯಿಸುತ್ತದೆ.

**04.** ಪುಸ್ತಕಗಳನ್ನು ದಿನಾಂಕ: 06.09.2010 ಸಂಜೆ 5–30 ಗಂಟೆಯೊಳಗೆ ಜಂಟಿ ನಿರ್ದೇಶಕರು [ಆಡಳಿತ] ಮತ್ತು ಸದಸ್ಯ ಕಾರ್ಯದರ್ಶಿಗಳು, ಪುಸ್ತಕ ಆಯ್ಕೆ ಸಮಿತಿ, ರಾಜ್ಯ ಶಿಕ್ಷಣ ಸಂಪನ್ಮೂಲ ಮತ್ತು ಮಾಹಿತಿ ಕೇಂದ್ರ [ಸೆರಿಕ್ ಗ್ರಂಥಾಲಯ],ಶೇಷಾದ್ರಿ ಪುರಂ [ಶೇಷಾದ್ರಿ ಪುರಂ ಪೋಲೀಸ್ ಠಾಣೆ ಎದುರು] ಬೆಂಗಳೂರು–560020 [ದೂರವಾಣಿ ಸಂಖ್ಯೆ:23464102] ಇವರ ವಿಳಾಸಕ್ಕೆ ಸಲ್ಲಿಸಬೇಕು. ನಂತರ ಸಲ್ಲಿಸಲಾಗುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

➢ ಪುಸ್ತಕಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯು ಅನುಸರಿಸುವ ಕ್ರಮಗಳು:

***01.*** ಸರ್ಕಾರಿ ಪ್ರೌಢಶಾಲಾ ಗ್ರಂಥ ಭಂಡಾರಕ್ಕೆ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಪುಸ್ತಕದ ಗಾತ್ರ, ಮುದ್ರಣಕ್ಕೆ ಉಪಯೋಗಿಸಿರುವ ಕಾಗದ, ವಿನ್ಯಾಸ, ಮುದ್ರಣದ ಗುಣಮಟ್ಟ ಮುಂತಾದ ವಿವರಗಳನ್ನು ವಿಶೇಷವಾಗಿ ಗಮನಿಸಲಾಗುವುದು.

***02.*** ಸಮಿತಿಯು ನಿರ್ಧರಿಸುವ ಬೆಲೆ ಮತ್ತು ಪುಸ್ತಕದ ವಾಸ್ತವ ಮುಖಬೆಲೆ ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.

*03.* ಪ್ರೌಢ ಶಾಲೆಗಳಿಗೆ ಉತ್ತಮವಾದ ಪುಸ್ತಕಗಳನ್ನು ಆಯ್ಕೆ ಮಾಡಲು ರಾಜ್ಯದ ಎಲ್ಲಾ ಭಾಗದ ಲೇಖಕರು ಮತ್ತು ಪ್ರಕಾಶಕರಿಂದ ಮನವಿ ಮತ್ತು ಪುಸ್ತಕಗಳ ಪ್ರತಿಗಳನ್ನು ಪಡೆಯಲು ಸಾರ್ವಜನಿಕ ಶಿಕ್ಷಣ ಇಲಾಖೆಯು ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳ ಮೂಲಕ ಪ್ರಕಟಣೆ ನೀಡುತ್ತದೆ.

*04.* ಪುಸ್ತಕಗಳನ್ನು ಆಯ್ಕೆ ಮಾಡುವಾಗ ಎಲ್ಲಾ ಭಾಗದ ಲೇಖಕರು, ಪ್ರಕಾಶಕರನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ.

*05.* ಪುಸ್ತಕದ ಆಯ್ಕೆ ಸಂದರ್ಭದಲ್ಲಿ ಬೆಲೆ ಕಡಿಮೆ ಇರುವ ಮತ್ತು ಉತ್ತಮ ವಿಷಯ ಹಾಗೂ ಗುಣಮಟ್ಟವುಳ್ಳ ಪುಸ್ತಕಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು.

<u>ಪುಸ್ತಕಗಳ ಬೆಲೆಯನ್ನು ತಾಂತ್ರಿಕ ನಿರ್ಧಿಷ್ಟತೆಗನುಗುಣವಾಗಿ ಕೆಳಕಂಡಂತೆ ಬೆಲೆಗಳನ್ನು ನಿಗದಿಪಡಿಸಲಾಗುವುದು</u>

| ಕ್ರ.ಸಂ | ಪುಸ್ತಕದ ಅಳತೆ | ಕಾಗದದ ಗುಣಮಟ್ಟ | ಒಂದು ಪುಟಕ್ಕೆ ನಿಗದಿಪಡಿಸಿದ ಬೆಲೆ |
|---|---|---|---|
| 1. | 1/8 ಕ್ರೌನ್ | ಸಾದಾ [ಬಿಳಿಹಾಳೆ] ಕಾಗದ | 0.30 ಪೈಸೆ |
| 2. | 1/8 ಕ್ರೌನ್ | ಉತ್ತಮ [ಮ್ಯಾಪ್ಲಿಥೋ] ಕಾಗದ | 0.40 ಪೈಸೆ |
| 3. | 1/8 ಡೆಮ್ಮಿ | ಸಾದಾ [ಬಿಳಿಹಾಳೆ] ಕಾಗದ | 0.40 ಪೈಸೆ |
| 4. | 1/8 ಡೆಮ್ಮಿ | ಉತ್ತಮ [ಮ್ಯಾಪ್ಲಿಥೋ] ಕಾಗದ | 0.50 ಪೈಸೆ |
| 5. | 1/4 ಕ್ರೌನ್ | ಉತ್ತಮ [ಮ್ಯಾಪ್ಲಿಥೋ] ಕಾಗದ | 0.80 ಪೈಸೆ |
| 6. | 1/4 ಡೆಮ್ಮಿ | ಸಾದಾ [ಬಿಳಿಹಾಳೆ] ಕಾಗದ | 0.80 ಪೈಸೆ |
| 7. | 1/4 ಡೆಮ್ಮಿ | ಉತ್ತಮ [ಮ್ಯಾಪ್ಲಿಥೋ] ಕಾಗದ | 1.00 |
| | | | |
| 1 | Crown 1/8 | Art paper 90 gsm Black & White Printing | ರೂ.0.70 |
| 2 | Crown 1/4 | Art paper 90 gsm Black & White Printing | ರೂ.1.20 |
| 3 | Crown 1/8 | Art paper 90 gsm Four colour Printing | ರೂ.1.40 |
| 4 | Crown 1/4 | Art paper 90 gsm Four colour Printing | ರೂ.2.50 |
| 5 | Demy 1/8 | Art paper 90 gsm Black & White Printing | ರೂ.0.80 |
| 6 | Demy 1/4 | Art paper 90 gsm Black & White Printing | ರೂ.1.40 |
| 7 | Demy 1/8 | Art paper 90 gsm Four colour Printing | ರೂ.1.80 |
| 8 | Demy 1/4 | Art paper 90 gsm Four colour Printing | ರೂ.2.75 |
| 9 | | Case Binding Crown & Demy 1/8 | Rs.20-00 |
| | | Crown & Demy 1/4 | Rs.25-00 |

*06.* ಪುಸ್ತಕದ ಗುಣಮಟ್ಟ ಮತ್ತು ತಾಂತ್ರಿಕ ನಿರ್ದಿಷ್ಟತೆಗಳ ಬಗ್ಗೆ ಸರ್ಕಾರಿ ಮುದ್ರಣಾಲಯದ ತಜ್ಞರಿಂದ ತಾಂತ್ರಿಕ ಸಲಹೆಯನ್ನು ಪಡೆಯಲಾಗುವುದು.

➢ ಆಯ್ಕೆಯಾದ ಪುಸ್ತಕಗಳ ಖರೀದಿ ಮತ್ತು ಪಾವತಿಗಳಿಗೆ ಅನುಸರಿಸುವ ಕ್ರಮಗಳು:

*01.* ಆಯ್ಕೆಯಾದ ಪುಸ್ತಕಗಳ ಸರಬರಾಜಿಸುವ ಬಗ್ಗೆ ಲೇಖಕರು ಮತ್ತು ಪ್ರಕಾಶಕರಿಗೆ ಸರಬರಾಜು ಆದೇಶ ನೀಡಲಾಗುವುದು .

*02.* ಲೇಖಕರು ಮತ್ತು ಪ್ರಕಾಶಕರು ಆದೇಶ ಪಡೆದ 20 ದಿನಗಳೊಳಗಾಗಿ ಪುಸ್ತಕಗಳನ್ನು ರಾಜ್ಯ ಶಿಕ್ಷಣ ಸಂಪನ್ಮೂಲ ಕೇಂದ್ರ,[ಸೆರಿಕ್ ಗ್ರಂಥಾಲಯ] ಶೇಷಾದ್ರಿ ಪುರಂ [,ಶೇಷಾದ್ರಿ ಪುರಂ ಪೋಲೀಸ್ ಠಾಣೆ ಎದುರು] *ಬೆಂಗಳೂರು–560020 [ದೂರವಾಣಿ ಸಂಖ್ಯೆ:23464102]* ಇವರ ವಿಳಾಸಕ್ಕೆ ಸರಬರಾಜು ಮಾಡುವುದು.

*03.* ಸರಬರಾಜಾದ ಪುಸ್ತಕಗಳ ಹಣ ಪಾವತಿಯನ್ನು ಮುಂದಿನ 60 ದಿನಗಳೊಳಗಾಗಿ ಪಾವತಿ ಮಾಡಲಾಗುವುದು.

*04.* ಲೇಖಕರು ಮತ್ತು ಪ್ರಕಾಶಕರುಗಳಿಗೆ ನೀಡುವ ಆದೇಶದ ಒಟ್ಟು ಮೌಲ್ಯ ರೂ. 50,000/– ಮೀರಿದಲ್ಲಿ ಶೇಕಡ 10ರಷ್ಟು ಮೊತ್ತದ ಫರ್‌ಫಾರ್ಮೆನ್ಸ್ ಸೆಕ್ಯೂರಿಟಿಯನ್ನು ರಾಷ್ಟ್ರೀಕೃತ ಬ್ಯಾಂಕೊಂದರ ಬೇಡಿಕೆ ಹುಂಡಿ ಮುಖೇನ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹೆಸರಿನಲ್ಲಿ ನೀಡಬೇಕಾಗುತ್ತದೆ.

*05.* ಆದೇಶ ಸ್ವೀಕರಿಸಿದ 7 ದಿವಸಗಳೊಳಗಾಗಿ ಇಲಾಖೆಗೆ ಒಪ್ಪಂದದ ಮುಚ್ಚಳಿಕೆ ನೀಡಬೇಕಾಗಿರುತ್ತದೆ.

*06.* ಕಳಪೆ ಗುಣಮಟ್ಟದ, ಹಳೆಯ, ಹರಿದುಹೋದ, ಮುದ್ರಣ ದೋಷದ, ಆಯ್ಕೆಯಾದ ಪುಸ್ತಕಗಳ ಬದಲಾಗಿ ಬೇರೆ ಪುಸ್ತಕದ ಸರಬರಾಜು ಇತ್ಯಾದಿ ಕಾರಣಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ತಿರಸ್ಕರಿಸುವ ಅಧಿಕಾರವು ಇಲಾಖೆಗೆ ಇರುತ್ತದೆ. ಇಂಥ ಪ್ರಕರಣಗಳಿಗೆ ಸಂಬಂಧಿಸಿದಂತೆ ತಿರಸ್ಕರಿಸಲ್ಪಟ್ಟ ಪುಸ್ತಕಗಳ ಒಟ್ಟು ಮೌಲ್ಯವನ್ನು ಫರ್‌ಫಾರ್ಮೆನ್ಸ್ ಸೆಕ್ಯೂರಿಟಿಯಿಂದ ಕಟಾಯಿಸಲಾಗುವುದು.

*07.* ಸರಬರಾಜು ಮಾಡುವ ಪುಸ್ತಕಗಳ ಕುರಿತಂತೆ ಕೃತಿಚೌರ್ಯ/ಕಾಪಿರೈಟ್ ಮತ್ತು ಇತರೆ ಸಿವಿಲ್ ವ್ಯಾಜ್ಯಗಳಿಗೆ ಸಂಬಂದಿಸಿದಂತೆ ಸಮಸ್ಯೆಗಳು ಉದ್ಭವಿಸಿದಲ್ಲಿ ಲೇಖಕರು/ಪ್ರಕಾಶಕರುಗಳೇ ತಮ್ಮ ಸ್ವಂತ ಖರ್ಚಿನಲ್ಲಿ ಪರಿಹರಿಸಿಕೊಳ್ಳತಕ್ಕದ್ದು. ಇಂತಹ ವಿಚಾರಗಳಿಗೆ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.

ಈ ಎಲ್ಲಾ ವಿವರಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ 'ವೆಬ್ ಸೈಟ್'ನಲ್ಲಿ ಲಭ್ಯವಿದೆ.

## ವೆಬ್ ಸೈಟ್ : http://schooleducation.kar.nic.in

-- ಸಹಿ--
ಸದಸ್ಯ ಕಾರ್ಯದರ್ಶಿಗಳು ಪುಸ್ತಕ ಆಯ್ಕೆ ಸಮಿತಿ
ಹಾಗೂ ಜಂಟಿ ನಿರ್ದೇಶಕರು [ಆಡಳಿತ]

-- ಸಹಿ--
ಅಧ್ಯಕ್ಷರು
ಪುಸ್ತಕ ಆಯ್ಕೆ ಸಮಿತಿ

ಜಂಟಿ ನಿರ್ದೇಶಕರು [ಆಡಳಿತ]
ಆಯುಕ್ತರ ಪರವಾಗಿ

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ5[8]ಸಗಟು ಖರೀದಿ:09:2010-11 ದಿನಾಂಕ: 06.08.2010

## ಪುಸ್ತಕಗಳನ್ನು ಸಲ್ಲಿಸುವ ನಮೂನೆ

| ಕ್ರ.ಸಂ | ವಿವರ | |
|---|---|---|
| 01 | ಪುಸ್ತಕದ ಹೆಸರು | |
| 02 | ಲೇಖಕರ ಹೆಸರು | |
| 03 | ಭಾಷೆ | ಕನ್ನಡ ☐ ಇಂಗ್ಲೀಷ್ ☐ ಹಿಂದೀ ☐ |
| 04 | ಪುಸ್ತಕ ಸಲ್ಲಿಸುತ್ತಿರುವವರ ಹೆಸರು ಮತ್ತು ವಿಳಾಸ.<br>ದೂರವಾಣಿ ಸಂಖ್ಯೆ :<br>ಮೊಬೈಲ್: | ಲೇಖಕರು ☐ ಪ್ರಕಾಶಕರು ☐ ಅನುವಾದಕರು ☐ |
| 05 | ಅನುವಾದವಾಗಿದ್ದರೆ ಮೂಲ ಲೇಖಕರ ಹೆಸರು ಮತ್ತು ಅನುವಾದಕರ ಹೆಸರು | |
| 06 | ಪ್ರಕಾಶಕರ ಹೆಸರು ಮತ್ತು ವಿಳಾಸ<br>[ದೂರವಾಣಿ ಸಂಖ್ಯೆ ನಮೂದಿಸುವುದು] | |
| 07 | ಶೀರ್ಷಿಕೆಗಳ ವಿವರ<br>ಪುಸ್ತಕದ ಬೆಲೆ | |
| | ಪ್ರಕಟಗೊಂಡಿರುವ ವರ್ಷ | |
| | ಆಕಾರ ಮತ್ತು ಒಟ್ಟು ಪುಟಗಳ ಸಂಖ್ಯೆ | |
| | ಮುದ್ರಿಸಿದ ವರ್ಣ: ಮುಖ ಪುಟ | ಏಕ ವರ್ಣ/ದ್ವಿವರ್ಣ/ಬಹುವರ್ಣ |
| | ಒಳ ಪುಟ | ಏಕ ವರ್ಣ/ದ್ವಿವರ್ಣ/ಬಹುವರ್ಣ |
| | ಬಳಸಿದ ಕಾಗದದ ಗುಣ ಮಟ್ಟ[ಜಿ.ಎಸ್.ಎಂ.] | |
| 08 | ಇತರೆ | |

ವಿ.ಸೂ: ಪ್ರತಿ ಶೀರ್ಷಿಕೆಗೆ[ಪುಸ್ತಕ] ಸಂಬಂಧಿಸಿದಂತೆ ಪ್ರತ್ಯೇಕ ನಮೂನೆಯಲ್ಲಿ ವಿವರ ಸಲ್ಲಿಸುವುದು. ಸೂಚನೆಗಳನ್ನು ಅರ್ಜಿ ನಮೂನೆಯ ಹಿಂಬದಿಯಲ್ಲಿ ಮುದ್ರಿಸಲಾಗಿದೆ.

ಸ್ಥಳ:

ದಿನಾಂಕ:

ಲೇಖಕರು/ಪ್ರಕಾಶಕರು

ದೂರವಾಣಿ/ಮೊಬೈಲ್ ಸಂಖ್ಯೆ:

ಸೂಚನೆಗಳು:

1. ಪುಸ್ತಕ ಸಲ್ಲಿಸುವ ನಮೂನೆಯಲ್ಲಿ ಪುಸ್ತಕದ ಹೆಸರನ್ನು ದಪ್ಪ ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸುವುದು.
2. ಪ್ರತಿ ಪುಸ್ತಕದೊಂದಿಗೆ ಒಂದು ನಮೂನೆಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3. ಪುಸ್ತಕವನ್ನು ಸಲ್ಲಿಸುತ್ತಿರುವವರು ಲೇಖಕರೇ, ಪ್ರಕಾಶಕರೇ ಅಥವಾ ಅನುವಾದಕರೇ ಎಂಬುದನ್ನು ಸ್ಪಷ್ಟವಾಗಿ ನಮೂದಿಸುವುದು ಹಾಗೂ ಪುಸ್ತಕ ಸಲ್ಲಿಸುವವರ ವಿಳಾಸವನ್ನು ಸ್ಪಷ್ಟವಾಗಿ ದೂರವಾಣಿ ಸಂಖ್ಯೆಯೊಂದಿಗೆ ನಮೂದಿಸುವುದು. [ಬಾಕ್ಸ್‌ನಲ್ಲಿ ಗುರುತು ಮಾಡುವುದು]
4. ಪುಸ್ತಕದ ಬೆಲೆ , ಪ್ರಕಟಗೊಂಡ ವರ್ಷ , ಬಳಸಿದ ಕಾಗದ ಮತ್ತು ಇತ್ಯಾದಿ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವುದು
5. ಪ್ರೌಢಶಾಲಾ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತಹ ಪುಸ್ತಕಗಳನ್ನು ಮಾತ್ರ ಸಲ್ಲಿಸುವುದು
6. ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗುವ ಕನ್ನಡ ಭಾಷೆ, ವ್ಯಾಕರಣ, ವಿಜ್ಞಾನ , ಸಮಾಜ ಶಾಸ್ತ್ರ , ಕ್ರೀಡೆ , ವೃತ್ತಿ ಶಿಕ್ಷಣ ಸಾಮಾನ್ಯ ಜ್ಞಾನ ಇವುಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಸಲ್ಲಿಸುವುದು
7. ಬೆಲೆಯನ್ನು ತಿದ್ದುಪಡಿ ಮಾಡಿರುವುದು ಮತ್ತು ಸ್ಟಿಕ್ಕರ್ ಅಂಟಿಸಿದ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ.
8. ಪುಸ್ತಕದ ಬೆಲೆಯನ್ನು ತಾಂತ್ರಿಕ ನಿರ್ಧಿಷ್ಟತೆಗನುಗಣವಾಗಿ ಪುಸ್ತಕ ಆಯ್ಕೆ ಸಮಿತಿಯು ಪರಿಶೀಲಿಸಿ ನಿಗಧಿಪಡಿಸುತ್ತದೆ.
9. ಪುಸ್ತಕದ ಆಯ್ಕೆ ಸಂದರ್ಭದಲ್ಲಿ ಬೆಲೆ ಕಡಿಮೆ ಇರುವ ಮತ್ತು ಉತ್ತಮ ವಿಷಯ ಹಾಗೂ ಗುಣಮಟ್ಟವುಳ್ಳ ಪುಸ್ತಕಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು.
10. ಪುಸ್ತಕಗಳ ಬೆಲೆಯನ್ನು ತಾಂತ್ರಿಕ ನಿರ್ಧಿಷ್ಟತೆಗನುಗುಣವಾಗಿ ಸರ್ಕಾರ ನಿಗಧಿಪಡಿಸಿದ ದರಗಳನ್ವಯ ನಿಗದಿಪಡಿಸಲಾಗುವುದು

11 ಸರಬರಾಜು ಮಾಡುವ ಪುಸ್ತಕಗಳ ಕುರಿತಂತೆ ಕೃತಿಚೌರ್ಯ/ಕಾಪಿರೈಟ್ ಮತ್ತು ಇತರೆ ಸಿವಿಲ್ ವ್ಯಾಜ್ಯಗಳಿಗೆ ಸಂಬಂದಿಸಿದಂತೆ ಸಮಸ್ಯೆಗಳು ಉದ್ಭವಿಸಿದಲ್ಲಿ ಲೇಖಕರು/ಪ್ರಕಾಶಕರುಗಳೇ ತಮ್ಮ ಸ್ವಂತ ಖರ್ಚಿನಲ್ಲಿ ಪರಿಹರಿಸಿಕೊಳ್ಳತಕ್ಕದ್ದು. ಇಂತಹ ವಿಚಾರಗಳಿಗೆ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.

12.ಅರ್ಜಿಗಳನ್ನು ದಿನಾಂಕ:06.09.2010 ಸಂಜೆ 5–30 ಗಂಟೆಯೊಳಗೆ ಜಂಟಿ ನಿರ್ದೇಶಕರು [ಆಡಳಿತ] ಮತ್ತು ಸದಸ್ಯ ಕಾರ್ಯದರ್ಶಿಗಳು, ಪುಸ್ತಕ ಆಯ್ಕೆ ಸಮಿತಿ, ರಾಜ್ಯ ಶಿಕ್ಷಣ ಸಂಪನ್ಮೂಲ ಮತ್ತು ಮಾಹಿತಿ ಕೇಂದ್ರ [ಸೆರಿಕ್ ಗ್ರಂಥಾಲಯ],ಶೇಷಾದ್ರಿ ಪುರಂ [ಶೇಷಾದ್ರಿ ಪುರಂ ಪೋಲೀಸ್ ಠಾಣೆ ಎದುರು] ಬೆಂಗಳೂರು–560020 [ದೂರವಾಣಿ ಸಂಖ್ಯೆ:23464102, 22213129 ]ಇವರ ವಿಳಾಸಕ್ಕೆ ತಲುಪುವಂತೆ ಸಲ್ಲಿಸಬೇಕು. ನಂತರ ಸಲ್ಲಿಸಲಾಗುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಇತರೆ ವಿವರಗಳು ಮತ್ತು ಮಾರ್ಗಸೂಚಿಯು ಸಾರ್ವಜನಿಕ ಶಿಕ್ಷಣ ಇಲಾಖೆಯ''ವೆಬ್ ಸೈಟ್‌ನಲ್ಲಿ'' ಲಭ್ಯವಿದೆ.

ವೆಬ್ ಸೈಟ್ : http://schooleducation.kar.nic.in